ನ್ನಳ ಪರಿಶೀಲನೆ ಆಗುತ್ತಿರುವುದು ಇದೆಲ್ಲಾ ಕಾರಣ ಗಳಿಂದ ನಿಧಾನವಾಗಿರಬಹುದು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕೆಲವನ್ನು ವರ್ಷದ ಆಖೈರುವರೆಗೂ ನುಮ್ಮನೆ ಇಟ್ಟುಕೊಂಡಿದ್ದು ವರ್ಷಾಖೈರಿಗೆ ಕೆಲವೇ ದಿನಗಳಿರುವಾಗ ಜಾಗ್ರತೆ ಜಾಗ್ರತೆಯಾಗಿ ಕೆಲಸ ಮಾಡಿ ಮುಂಜೂರಾಗಿರುವ ಹಣ ಲ್ಯಾಪ್ಸ್ ಆಗದ ಹಾಗೆ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅಂಥ ಸಂದರ್ಭ ಗಳಾಗ್ಯಾವುವಾದರೂ ಇದ್ದರೆ ಅವುಗಳನ್ನು ಸರ್ಕಾರದ ಗಮನಕ್ಕೆ ತಂದರೆ, ವಿಚಾರಿಸಿ ಸೂಕ್ತ ಕಾರ್ಯಕ್ರಮ ಕೈಗೊಳ್ಳಲಾಗುತ್ತದೆ.

Credit Facilities to Agriculturists in Bangalore District.

Q.—347. **Sri K. V. BYRE GOWDA** (Bangalore North).—

Will the Government be pleased to state :—

(*a*) the credit facilities that they have provided for to the agriculturists in the State ;

(*b*) the amount that has been given to Bangalore District (talukwise information may kindly be furnished) ?

A.—**Dr. R. NAGAN GOWDA** (Minister for Agriculture).—

(*a*) Government have actually disbursed long-term loans for the discharge of prior indebtedness through the Land Mortgage Bank and its primaries, to the tune of Rs. 1·39 crores in 7,726 cases in the Co-operative Department.

So far as the Agriculture and Food Production Departments are concerned the following kinds of credit facilities are being afforded to the ryots :—

(1) Supply of used tractors of the Department at reduced rates, and of electrical and diesel oil pumpsets and Persian wheels to the ryots on hire-purchase system.

(2) Supply of manures on short-term credit basis.

(3) Land improvement and takkavi loans and loans for irrigation wells (issued by the Revenue Department).

(*b*) Please see Statements Nos. I and II appended below.

Statement No. I indicating the figures for 1953-54.

	Names of the Taluks	Departments	
		Co-operation.	Agriculture and Food Production
		Rs.	Rs.
1	Bangalore (North and South)	2,37,905	14,139
2	Devanahalli	37,500	7,744
3	Hoskote	64,175	4,235
4	Channapatna	12,815	13,126
5	Ramanagaram	28,900	2,346
6	Anekal	70,725	1,795
7	Magadi	3,33,350	6,346
8	Nelamangala	69,395	13,359
9	Dodballapur	86,470	10,344
10	Kanakapura	22,000	2,926
	Total ...	9,63,235	76,360

(DR. R. NAGAN GOWDA.)

Statement No. II showing the loan actually sanctioned by the Revenu Department under Irrigation Wells, Land Improvement Loans an Takkavi Loans in Bangalore District during 1953-54.

	Names of the Taluks	Loans for Irrigation Well		Loans for Land Improvement		Takkavi Loans	
		Allotment	Amount spent	Allotment	Amount spent	Allotment	Amount spent
		Rs.	Rs.	Rs.	Rs.	Rs.	Rs.
1	Bangalore North ...	...	...	1,500	350	2,700	1,900
2	Bangalore South ...	750	...	1,500	100	3,700	750
3	Kanakapura ...	750	...	1,500	...	3,700	...
4	Channapatna ...	...	...	1,500	...	1,700	1,150
5	Ramanagaram ..	1,500	...	1,500	125	2,700	2,000
6	Magadi ...	...	...	1,500	1,100	1,700	900
7	Devanahalli ...	6,000	...	4,500	4,200	8,700	8,700
8	Hoskote ...	9,000	...	3,500	3,500	8,700	8,700
9	Anekal ...	...	...	1,500	1,200	2,700	3,500
10	Nelamangala ...	6,000	...	1,500	750	3,700	3,150
11	Dodballapur ...	13,500	750	6,500	5,125	23,700	18,300
	Total ...	37,500	750	26,500	16,450	63,700	49,050

ಶ್ರೀ ಕೆ. ಎ. ಬೈರೇಗೌಡ.—ಜಮೀನು ಅಡವಾನದ ಬ್ಯಾಂಕುಗಳು ಸಾಲ ಕೊಡುತ್ತವೆ ಎಂದು ಹೇಳಿದ್ದೀರಿ. ಅಲ್ಲಿ ಹಳೆಯ ಸಾಲ ತೀರಿಸುವುದಕ್ಕೆ ಮಾತ್ರವಾನೆ ಸಾಲಕೊಡುವುದು ?

Mr. SPEAKER.—Yes, it is understood. Yesterday it was answered.

ಶ್ರೀ ಕೆ. ಎ. ಬೈರೇಗೌಡ.—ಇದಲ್ಲದೆ ಸಾಲ ತೆಗೆದುಕೊಳ್ಳುವುದಕ್ಕೆ ಬೇರೆ ಯಾವುದಾದರೂ ಏರ್ಪಾಡು ಮಾಡುವುದಕ್ಕಾಗುವುದಿಲ್ಲವೇ ?

*ಡಾ॥ ಆರ್. ನಾಗನಗೌಡ.—ತಕಾವಿ ಲೋನು, ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನು ಇವುಗಳನ್ನೆಲ್ಲಾ ಕೊಟ್ಟಿದ್ದೇವೆ. ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ಷಾರ್ಟ್-ಟರ್ಮ್ ಲೋನು ಕೊಡುತ್ತೇವೆ.

ಶ್ರೀ ಕೆ. ಎ. ಬೈರೇಗೌಡ.—ಇವುಗಳನ್ನು ಸುಲಭವಾದ ಕಂತುಗಳಲ್ಲಿ ವಾಪಸು ಕೊಡುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದೀರಾ ?

ಡಾ॥ ಆರ್. ನಾಗನಗೌಡ —ಕೆಲವನ್ನು ಅದೇ ಕಂಡಿಷ್ಟ್ ಮೇಲೆ ಕೊಟ್ಟಿದ್ದೇವೆ.

ಶ್ರೀ ಕೆ. ಎ. ಬೈರೇಗೌಡ.—ಆ ರೀತಿ ಕೊಡದೆ ಏನೂ ಕಾರಣವಿಲ್ಲದೆ reject ಮಾಡಿರುವುದು ಗೊತ್ತೇ?

ಡಾ॥ ಆರ್. ನಾಗನಗೌಡ.—ಕಾರಣವಿಲ್ಲದೆ reject ಮಾಡಿರಲಿಕ್ಕಿಲ್ಲ. ಅಂಥ ನಂದರ್ಭ ನನ್ನ ಗಮನಕ್ಕೆ ತಂದರೆ ವಿಚಾರಿಸುತ್ತೇನೆ

ಶ್ರೀ ಕೆ. ಎ. ಬೈರೇಗೌಡ. —ಇಂಡಸ್ಟ್ರಿಯಲ್ ಲೋನ್ ತೆಗೆದುಕೊಂಡಿರತಕ್ಕ ಮನುಷ್ಯನಿಗೆ ಈ ಸಾಲಗಳನ್ನು ತೆಗೆದುಕೊಳ್ಳಲು ಅವಕಾಶವಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಈ ಸಾಲಗಳನ್ನು ಕೊಡುವುದಕ್ಕೆ ಕೆಲವು ರೂಲ್ಸ್ ಮಾಡಿದ್ದಾರೆ. ಆ ರೂಲ್ಸ್ ಪ್ರಕಾರ ಕೊಟ್ಟಿದ್ದಾರೆ. ಆ ರೂಲ್ಸ್‌ಗನು ಸಾರವಾಗಿ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ. ಅದನ್ನು ಯಾವ ರೀತಿಯಾದರೂ ಬದಲಾವಣೆ ಮಾಡುವ ಅವಶ್ಯಕತೆ ಇದ್ದರೆ, ಅದನ್ನು ಸೂಚನೆ ಮಾಡಿದರೆ, ವಿಚಾರ ಮಾಡುತ್ತೇನೆ.

ಶ್ರೀ ಕೆ. ಎ. ಬೈರೇಗೌಡ —ಈ ವ್ಯವಸಾಯದ ಸಾಲ ಕೊಡುವುದನ್ನು concerned departments ನವರು ಕೊಡುವುದರಿಂದ ಬಹಳ ನಿಧಾನವಾಗುತ್ತಿಲ್ಲವೇ ?

ಡಾ॥ ಆರ್. ನಾಗನಗೌಡ.—ಸಾಧಾರಣವಾಗಿ ಸಂಬಂಧಪಟ್ಟ ಇಲಾಖೆಯವರೇ ಸಾಲಕೊಡುವುದು. ಸರ್ಕಾರದವರು ನೇರವಾಗಿ ಕೊಟ್ಟಿರುವ ಪೊಬಲಗು ಬಹಳ ಸ್ವಲ್ಪ. ಈಗಾಗಲೇ ಲಕ್ಷಾಂತರ ರೂಪಾಯಿಗಳನ್ನು ಅವರು ರೈತರಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ಕೊಟ್ಟಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬೆಂಗಳೂರು ಜಿಲ್ಲೆಯಲ್ಲಿ ನೀರಾವರಿ ಬಾವಿಗಳಿಗಾಗಿ ಸಾಲ ಕೊಡಲು

* Asterisk indicates that the speeches or remarks have not been revised by the Member concerned.

ಹಣ ಒದಗಿಸಿರುವುದರಲ್ಲಿ ಬಹು ಭಾಗದ ಹಣ ಉಳಿದು ಹೋಗಿರುವುದಕ್ಕೆ ಕಾರಣವೇನು, ಸ್ವಾಮಿ ?

ಡಾ॥ ಆರ್. ನಾಗನಗೌಡ.—ವಿಚಾರಿಸಬೇಕು. ಏನು ಕಾರಣವೋ ಗೊತ್ತಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಸಾಮಾನ್ಯವಾಗಿ ಅಧಿಕಾರಿಗಳು ತಮ್ಮ ಜವಾಬ್ದಾರಿ ಮೇಲೆ ಸಾಲ ಕೊಡಬೇಕಾಗುತ್ತದೆ ಎಂಬ ಮನೋಭಾವದಿಂದ ಸಾಲ ಕೊಡದೇ ಅನೇಕ ಅರ್ಜಿಗಳು ನಿಂತುಹೋಗಿರುವುದು ತಮ್ಮ ಗಮನಕ್ಕೆ ಬಂದರೆ ಸಾಲ ಕೊಡಬೇಕೆಂದು ಹೇಳಿ ಅಂಥ ಅಧಿಕಾರಿಗಳಿಗೆ ಸೂಕ್ತ ಇನ್‌ಸ್ಟ್ರಕ್ಷನ್ ಕೊಡುತ್ತೀರಾ ?

ಡಾ॥ ಆರ್. ನಾಗನಗೌಡ.—ವಿಚಾರಿಸುತ್ತೇನೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಇದೇ ರೀತಿ ಜಪ್ತಿನು ಆಬಾದಿನ ಸಾಲಗಳು, ತಕಾವಿ ಸಾಲಗಳು ಇವುಗಳನ್ನು ಕೊಡುವಾಗ ಅಧಿಕಾರಿಗಳು ತಮ್ಮ ಜವಾಬ್ದಾರಿಯಿಂದ ಕೊಡಬೇಕು ಎಂಬ ದೃಷ್ಟಿಯಿಂದ ಸಾಲ ಕೊಡದೇ ಇರುವುದು ತಮ್ಮ ನಿಗಾಕ್ಕೆ ಬಂದರೆ ಅಂಥ ಅಧಿಕಾರಿಗಳಿಗೆ ಸೂಕ್ತವಾದ ರೀತಿಯಲ್ಲಿ ತಿಳಿವಳಿಕೆ ಕೊಟ್ಟು ಸಾಲ ದೊರೆಯುವಂತೆ ವ್ಯವಸ್ಥೆ ಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ಅಧಿಕಾರಿಗಳು ತಾವೇ ಜವಾಬ್ದಾರಿ ವಹಿಸಿಕೊಳ್ಳಬೇಕಾದ ಅವಶ್ಯಕತೆ ಇಲ್ಲ. ಸಾಕಾದಷ್ಟು ಸೆಕ್ಯೂರಿಟಿ ಇದೆಯೇ ಇಲ್ಲವೇ ಎಂಬುದನ್ನು ನೋಡಿಕೊಂಡು ರೂಲ್ಸ್ ಪ್ರಕಾರ ಸಾಲ ಕೊಡಬಹುದು.

12-30 P.M.

ಶ್ರೀ ಎ. ವಿ. ನರಸಿಂಹರೆಡ್ಡಿ.—ಎಲ್ಲಾ ತಾಲ್ಲೂಕುಗಳಿಂದಲೂ ಅನೇಕ ಅರ್ಜಿಗಳು ಬಂದರೂ ಕೂಡ ತಾಲ್ಲೂಕಿನಿಂದ ತಾಲ್ಲೂಕಿಗೆ ಹಣ ಕೊಡುವುದರಲ್ಲಿ ವ್ಯತ್ಯಾಸ ಮಾಡಿರುವುದಕ್ಕೆ ಕಾರಣವೇನು ?

ಡಾ॥ ಆರ್. ನಾಗನಗೌಡ.—ಕೆಲವು ತಾಲ್ಲೂಕುಗಳಲ್ಲಿ ವಿಶೇಷವಾಗಿ ಅರ್ಜಿ ಬಂದಿರುವುದೇ ಅದಕ್ಕೆ ಕಾರಣವಿರಬೇಕು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅರ್ಜಿಗಳು ಎಲ್ಲಾ ತಾಲ್ಲೂಕುಗಳಲ್ಲೂ ಒಂದೇ ರೀತಿಯಾಗಿ ಬಂದರೂ ಸರಿಯಾದ ರೀತಿಯಲ್ಲಿ ದಾವಾಷಾ ಪ್ರಕಾರ ಹಣ ಒದಗಿಸಿಲ್ಲವೆಂದು ಹೇಳಿದರೆ ಅದಕ್ಕೆ ತಕ್ಕ ಏರ್ಪಾಡು ಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ಮಾಡುತ್ತೇವೆ.

ಶ್ರೀ ಎಸ್. ಎಂ. ಮರಿಯಪ್ಪ.—ಕೊಡುವ ಸಾಲ ವೆಲ್ಲವನ್ನೂ ಮಲ್ಟಿ-ಪರ್ಪಸ್ ಸೊಸೈಟಿಗಳ ಮೂಲಕ ಹಂಚಲು ಏರ್ಪಾಡು ಮಾಡುತ್ತೇವೆಂದು ಹೇಳುತ್ತೀರಿ. ಇದನ್ನು ಈ ವರ್ಷ ಕಾರ್ಯರೂಪಕ್ಕೆ ತರುತ್ತೀರಾ ?

ಡಾ॥ ಆರ್. ನಾಗನಗೌಡ.—ಬಹಳ ಬೇಗ ಜಾರಿಗೆ ತರಬೇಕೆಂದಿದೆ. ಈಗ ಸ್ಪೆಷಲ್ ಆಡಿಟ್ ಇಲಾಖೆಯನ್ನು ಬಲಪಡಿಸುತ್ತಿದ್ದೇವೆ ಮತ್ತು ಇನ್‌ಸ್ಪೆಕ್ಟರು ಮುಂತಾದವರನ್ನಿಟ್ಟು ಈಗ ಕಾರ್ಯಕ್ರಮ ತೆಗೆದುಕೊಂಡಿದೆ.

ಶ್ರೀ ಎಸ್. ಎಂ. ಮರಿಯಪ್ಪ.—ಟ್ರ್ಯಾಕ್ಟರು ಗಳನ್ನು ಹಿಂದೆ ಸರ್ಕಾರದವರು ಹೈರ್ ಪರ್ಚೇಸ್ ಸಿಸ್ಟಂ ಪ್ರಕಾರ ಕೊಟ್ಟರು. ಅವು ಉಪಯೋಗವಾಗದೆ ಹೋಗಿರುವುದರಿಂದ ಸರ್ಕಾರಕ್ಕೆ ಅವನ್ನು ವಾಪಸು ತೆಗೆದುಕೊಳ್ಳುತ್ತೀರಾ ?

ಡಾ॥ ಆರ್. ನಾಗನಗೌಡ.—ವಾಪಸು ತೆಗೆದು ಕೊಳ್ಳಿ ಎಂದು ಹೇಳಿದರೆ ಹೇಗೆ ಸಾಧ್ಯ ?

ಶ್ರೀ ಎಸ್. ಎಂ. ಮರಿಯಪ್ಪ.—ಸರ್ಕಾರಕ್ಕೆ ವಾಪಸು ತೆಗೆದುಕೊಳ್ಳಬೇಕೆಂದು ಮನವಿ ಬಂದಿಲ್ಲವೆ ?

ಡಾ॥ ಆರ್. ನಾಗನಗೌಡ.—ಬಂದಿದೆ. ಈಗ ವರ್ಷ, ಆರು ತಿಂಗಳು ಹೀಗೆ ಉಪಯೋಗ ಮಾಡಿ ಕೊಂಡು ತರುವಾಯ ವಾಪಸು ತೆಗೆದುಕೊಳ್ಳಿ ಎಂದು ಹೇಳುತ್ತಿದ್ದಾರೆ. ಅವರು ತೆಗೆದುಕೊಂಡು ಹೋಗುವಾಗ ಟ್ರ್ಯಾಕ್ಟರ್ ಪರೀಕ್ಷೆ ಮಾಡಿ ತೆಗೆದುಕೊಳ್ಳಿ ಎಂದು ಸರ್ಕಾರದವರು ಹೇಳಿದ್ದಾರೆ. ಹಾಗಿರುವಾಗ ಈಗ ವಾಪಸು ತೆಗೆದುಕೊಳ್ಳಿ ಎಂದು ಹೇಳುವುದು ಚೆನ್ನಾಗಿಲ್ಲ. ಹಾಗೆ ತೆಗೆದುಕೊಳ್ಳುವುದು ಬಹಳ ಕಷ್ಟವೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ.

ಶ್ರೀ ಎಸ್. ಎಂ. ಮರಿಯಪ್ಪ.—ಸರ್ಕಾರಕ್ಕೆ ಕೊಡ ಬೇಕಾದ ಸಾಲದ ಹೊರೆ ತಪ್ಪಿಸಿಕೊಳ್ಳಲು ಈ ರೀತಿ ಯಾಗಿ ವಾಪಸು ಪಡೆಯಲು ಅವಕಾಶ ಮಾಡುತ್ತೀರಾ?

ಡಾ॥ ಆರ್. ನಾಗನಗೌಡ.—ಸದ್ಯಕ್ಕೆ ಯಾರೂ ಹಾಗೆ ಮಾಡಿರಲಿಕ್ಕಿಲ್ಲ.

ಶ್ರೀ ಮೈ. ಎಂ. ಚಂದ್ರಶೇಖರಯ್ಯ.—ಈಗ ಸರ್ಕಾರ ದಿಂದ ಟ್ರ್ಯಾಕ್ಟರುಗಳನ್ನು ತೆಗೆದುಕೊಂಡಿರುವವರಿಗೆ ಬಹಳ ನಷ್ಟವಾಗುತ್ತಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಡಾ॥ ಆರ್. ನಾಗನಗೌಡ.—ಟ್ರ್ಯಾಕ್ಟರುಗಳನ್ನು ಮಾರಾಟ ಮಾಡುವಾಗ ಎಲ್ಲಾ ಸೆಕೆಂಡ್ ಹ್ಯಾಂಡ್ ಟ್ರ್ಯಾಕ್ಟರುಗಳೆಂಬುದು ಜನರಿಗೆ ಗೊತ್ತಿತ್ತು. ಸರ್ಕಾರದವರಾದರೂ ಟ್ರ್ಯಾಕ್ಟರುಗಳು ಹೇಗಿವೆಯೆಂಬುದನ್ನು ಪರೀಕ್ಷಿಸಿ ಕಣ್ಣುಬಿಟ್ಟು ನೋಡಿ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಆದ್ದರಿಂದ ಚೆನ್ನಾಗಿ ನೋಡಿಯೇ ತೆಗೆದುಕೊಂಡಿದ್ದಾರೆಂದು ಭಾವಿಸಿದ್ದೆವು. ಈಗ ವಾಪಸು ತೆಗೆದುಕೊಳ್ಳಬೇಕೆಂದು ಹೇಳಿದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಮೈ. ಎಂ. ಚಂದ್ರಶೇಖರಯ್ಯ.—ಟ್ರ್ಯಾಕ್ಟರು ಗಳನ್ನು ತೆಗೆದುಕೊಂಡಿರುವವರೆಲ್ಲಾ ಸೇರಿ ನಿಯೋಗ ಬಂದಿದ್ದರೆ ?

ಡಾ॥ ಆರ್. ನಾಗನಗೌಡ.—ಒಂದು ಮನವಿ ಬಂದಿದೆ.

ಶ್ರೀ ಮೈ. ಎಂ. ಚಂದ್ರಶೇಖರಯ್ಯ.—ಸಮಿತಿ ಮಾಡಿ ತೀರ್ಮಾನ ಮಾಡುತ್ತೇವೆಂದು ಉತ್ತರ ಕೊಟ್ಟಿದ್ದೀರಾ ?

ಡಾ॥ ಆರ್. ನಾಗನಗೌಡ.—ಇಲ್ಲ.

ಶ್ರೀ ಮೈ. ಎಂ. ಚಂದ್ರಶೇಖರಯ್ಯ.—ಟ್ರ್ಯಾಕ್ಟರು ಗಳ ವಿಷಯದಲ್ಲಿ ಸಮಿತಿಯನ್ನು ರಚಿಸಿದ್ದೀರಾ ?

ಡಾ॥ ಆರ್. ನಾಗನಗೌಡ.—ಸಮಿತಿ ಯಾವುದೂ ಇಲ್ಲ; ಮಾಡುವ ಸಂದರ್ಭವೂ ಇರಲಿಕ್ಕಿಲ್ಲ, ವಿಚಾರ ಮಾಡಬೇಕು.

Sri T. MARIAPPA.—In answer to (*a*) it is said that Government have actually disbursed long-term loans, etc. May I take it that it is an additional amount to the usual operation of the Land Mortgage Bank or has the Land Mortgage Bank itself distributed to the tune of 1·39 crores ?

Dr. R. NAGAN GOWDA.—I believe this is the amount that has been distributed by the Land Mortgage Bank; but, as is known to the Hon'ble Member, the debentures of the Land Mortgage Bank are guaranteed by Government.

(DR. R. NAGAN GOWDA.)

So, these are regular operations of the Land Mortgage Bank.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ರೈತರಿಗಾಗಿ ಬ್ಯಾಂಕನ್ನು ಯಾವ ಡಿಸ್ಟ್ರಿಕ್ಟಿನಲ್ಲಿ ಸ್ಥಾಪನೆಮಾಡುವುದಕ್ಕೆ ಅವಕಾಶ ಮಾಡಿದೆ ?

ಡಾ॥ ಆರ್. ನಾಗನಗೌಡ.—ಈಗಾಗಲೆ ಮೂರು ಡಿಸ್ಟ್ರಿಕ್ಟುಗಳಲ್ಲಿ ಏರ್ಪಾಡುಮಾಡಿದೆ. ಮಿಕ್ಕ ಡಿಸ್ಟ್ರಿಕ್ಟುಗಳಲ್ಲಿ ಶೀಘ್ರದಲ್ಲಿ ಏರ್ಪಾಡು ಮಾಡುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ಸಾಗರದ ತಾಲ್ಲೂಕು ಕರೂರು ಮತ್ತು ಬಾರಂಗಿ ಹೋಬಳಿಯಲ್ಲಿ ಬಂದಿರುವ ತಕಾವಿ ಸಾಲದ ಅರ್ಜಿಗಳನ್ನು ಹೊನ್ನೆ ಮರಡು ಪ್ರಾಜೆಕ್ಟ್ ಮಾಡಿದರೆ ಅರ್ಜಿದಾರರು ಜಮೀನು ಮುಳುಗಡೆಯಾಗುತ್ತದೆಂದು ನಿರಾಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಡಾ॥ ಆರ್. ನಾಗನಗೌಡ.—ಹಾಗೆ ಅವನ್ನು ನಿರಾಕರಿಸಿದ್ದರೆ ಅದು ನ್ಯಾಯವಲ್ಲವೆ ? ಜಮೀನು ಮುಳುಗಡೆಯಾದರೆ ತಕಾವಿ ಸಾಲ ಭೂಮಿ ಅಡವಿನ ಮೇಲೆ ಕೊಟ್ಟರೆ ಕಷ್ಟವಲ್ಲವೆ ?

ಶ್ರೀ ಎಸ್. ಗೋಪಾಲಗೌಡ.—ಈಗ ಕೊಡುವ ತಕಾವಿ ಸಾಲವನ್ನು ಎಷ್ಟು ವರ್ಷಗಳಿಗೊಂದು ಸಲ ವಾಪಸುಪಡೆಯುವುದು ?

ಅಧ್ಯಕ್ಷರು.—ಅದಕ್ಕೆಲ್ಲಾ ಕಾನೂನಿದೆ.

ಶ್ರೀ ಎಸ್. ಗೋಪಾಲಗೌಡ.—ಎಷ್ಟು ವರ್ಷಗಳಿಗೊಂದು ಸಲ ವಾಪಸುಪಡೆಯಬೇಕೆಂದು ರೂಲ್ಸ್ ಇದೆ ?

ಡಾ॥ ಆರ್. ನಾಗನಗೌಡ—ಸಾಮಾನ್ಯವಾಗಿ ವರ್ಷಕ್ಕೆ ಒಂದು ಕಂತಿನಂತೆ ವಸೂಲುಮಾಡುವಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಈಗ ತಾವು ಪ್ರಾಜೆಕ್ಟ್ ಕಟ್ಟಿದರೆ ಮುಳುಗಡೆಯಾದ ಜಮೀನಿನವರಿಗೇನು ಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ಅದಕ್ಕೆ ಕಂಪೆನ್ಸೇಷನ್ ಕೊಡುತ್ತಾರೆ.

ಶ್ರೀ ಎಸ್. ಸಿದ್ದಪ್ಪ.—ಮಾಗಡಿ ತಾಲ್ಲೂಕಿನಲ್ಲಿ 1,500 ರೂಪಾಯಿ ಜಮೀನು ಆಬಾದಿನ ಸಾಲವನ್ನು 1953-54ರಲ್ಲಿ ಕೊಟ್ಟಿದ್ದರಲ್ಲಿ ಕೇವಲ 125 ರೂಪಾಯಿ ಮಾತ್ರ ಖರ್ಚಾಗಿರುವುದಕ್ಕೆ ಕಾರಣವೇನು ?

ಡಾ॥ ಆರ್. ನಾಗನಗೌಡ.—ಅಲ್ಲಿ ಸಾಹುಕಾರರು ಹೆಚ್ಚಾಗಿದ್ದು ಸಾಲ ಕೇಳಲಲ್ಲವೆಂದು ಕಾಣುತ್ತದೆ.

ಅಧ್ಯಕ್ಷರು.—ತಾವು ಲೆಕ್ಕವನ್ನು ವ್ಯತ್ಯಾಸಮಾಡಿಕೊಂಡು ತಪ್ಪಾಗಿ ಪ್ರಶ್ನೆ ಕೇಳಿದ್ದೀರಿ. ಮಾಗಡಿ ತಾಲ್ಲೂಕಿಗೆ 1,500 ರೂಪಾಯಿಗಳನ್ನು ಕೊಟ್ಟಿರುವುದರಲ್ಲಿ 1,100 ರೂಪಾಯಿ ಖರ್ಚಾಗಿದೆಯೆಂದು ಹೇಳಿದೆ.

ಶ್ರೀ ಎಸ್. ಸಿದ್ದಪ್ಪ.—ಬಾಕಿ ಹಣ ಖರ್ಚಾಗುವುದಕ್ಕೆ ಅರ್ಜಿ ಬಂದಿರಲಿಲ್ಲವೆ ?

ಡಾ॥ ಆರ್. ನಾಗನಗೌಡ.—ಬಂದಿರಲಿಕ್ಕಿಲ್ಲ, ವಿಚಾರಿಸ ತ್ತೇನೆ.

ಶ್ರೀ ಎಸ್. ಸಿದ್ದಪ್ಪ.—ಈ ತರಹ ಸಾಲ ತಾಲ್ಲೂಕಾ ಮಳೆ ಕೊಡುವುದು ರೈತಾಪಿಜನರಿಗೆ ಸಕಾಲದಲ್ಲಿ ಹಂಚಿಲ್ಲಡುತ್ತಿಲ್ಲ, ನಿಧಾನವಾಗುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಡಾ॥ ಆರ್. ನಾಗನಗೌಡ.—ಬಂದಿಲ್ಲ, ಹಾಗೇನಾದರೂ ನಿಧಾನವಾಗಿದ್ದರೆ ವಿಚಾರ ತಿಳಿಸಿದರೆ ಪರಿಶೀಲಿಸುತ್ತೇವೆ, ಬಹಳ ಶೀಘ್ರವಾಗಿ ಕೊಡ ಬೇಕೆಂದು ತೀರ್ಮಾನಮಾಡಿರುವುದರಿಂದ ಎಲ್ಲಾ ದರೂ ಆಲಸ್ಯವಾಗಿದ್ದರೆ ಸರ್ಕಾರಕ್ಕೆ ತಿಳಿಸಿದರೆ ಕಾರಣ ವಿಚಾರಿಸಿ ಸೂಕ್ತಕ್ರಮಕೈಗೊಳ್ಳುತ್ತೇವೆ.

ಶ್ರೀ ವಿ. ಮಸಿಯಪ್ಪ.—ಈ ತಕಾವಿಸಾಲವನ್ನು ಮತ್ತು ಲ್ಯಾಂಡ್ ಇಂಪ್ರೂವ್‌ಮೆಂಟ್ ಸಾಲವನ್ನು ಕೊಡತಕ್ಕಬಗ್ಗೆ ಅಮಲ್ದಾರರಿಗೂ ಮತ್ತು ಸಬ್‌ಡಿವಿಜಿ ಆಫೀಸರಿಗೂ ಇರತಕ್ಕ limitನ್ನು ರೂ. 250 ರಿಂದ ರೂ. 500 ಕ್ಕೆ ಹೆಚ್ಚಿಸಬೇಕೆಂಬ ಬಗ್ಗೆ ಮನವಿಗಳು ಸರ್ಕಾರಕ್ಕೆ ಬಂದಿಲ್ಲವೇ ?

ಡಾ॥ ಆರ್. ನಾಗನಗೌಡ.—ಬಂದಿವೆ.

ಶ್ರೀ ವಿ. ಮಸಿಯಪ್ಪ.—ಈ ಬಗ್ಗೆ ಏನು ಕಾರ್ಯಕ್ರಮಕೈಗೊಂಡಿದ್ದೀರಿ ?

Dr. R. NAGAN GOWDA.—Notice.

ಶ್ರೀ ವಿ. ಮಸಿಯಪ್ಪ.—ತಾರೀಖು 1--3--53 ರಿಂದ distress area ದಲ್ಲಿ irrigation wells ಗಾಗಿ 500 ರೂಪಾಯಿಗಳನ್ನು ಕೊಡುವ ವಿಚಾರದಲ್ಲಿ retrospective effect ಕೊಡುವುದಕ್ಕೆ ಸೂಕ್ತ ಕಾರ್ಯಕ್ರಮಕೈಗೊಳ್ಳುವುದಾಗಿ ಹೇಳಿದ್ದೀರಿ. ಏನು ಕಾರ್ಯಕ್ರಮಕೈಗೊಂಡಿದ್ದೀರಿ ?

ಡಾ॥ ಆರ್. ನಾಗನಗೌಡ.—ನೋಟೀಸ್ ಕೊಟ್ಟರೆ, ವಿಚಾರಿಸಿ ತಿಳಿಸುತ್ತೇನೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ತಕಾವಿ ಸಾಲಗಳ ಬಗ್ಗೆ ಅರ್ಜಿಗಳನ್ನು ಹಾಕಿಕೊಂಡಿದ್ದರೆ ಅವುಗಳನ್ನು ಪರಿಶೀಲನೆಗೆ ಸಹ ತೆಗೆದುಕೊಳ್ಳದೆ ತಕಾವಿ ಸಾಲವನ್ನು ನಿಲ್ಲಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಡಾ॥ ಆರ್. ನಾಗನಗೌಡ.—ತಿಳಿಯದು. ಎಲ್ಲಿ, ಯಾವ ಸಂದರ್ಭದಲ್ಲಿ ಎಂಬುದನ್ನು ತಿಳಿಸಿದರೆ ವಿಚಾರಿಸುತ್ತೇನೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ತುಮಕೂರು ಜಿಲ್ಲೆಯಲ್ಲಿ, ತುಮಕೂರು ಮತ್ತು ಇತರ ಕೆಲವು ತಾಲ್ಲೂಕುಗಳಲ್ಲಿ ತಕಾವಿ ಸಾಲಗಳನ್ನು ಕೊಡದೆ ಕೆಲವು ಅರ್ಜಿಗಳನ್ನು ಹಾಗೆಯೇ ಉಳಿಸಿಬಿಟ್ಟಿರುತ್ತಾರೆ. ಅದರ ಸಲುವಾಗಿ ಹಣವು ಸಹ ಸರ್ಕಾರಕ್ಕೆ ಉಳಿತಾಯವಾಗಿ ಹೋಗಿದೆ.

ಡಾ॥ ಆರ್. ನಾಗನಗೌಡ.—1953-54 ನೆಯ ಸಾಲಿನಲ್ಲಿ ತುಮಕೂರು ಜಿಲ್ಲೆಯಲ್ಲಿ 3 ಲಕ್ಷ 92 ಸಾವಿರ ರೂಪಾಯಿಗಳಷ್ಟು ತಕಾವಿ ಸಾಲವನ್ನೂ, 32 ಸಾವಿರ ರೂಪಾಯಿಗಳಷ್ಟು ಲ್ಯಾಂಡ್ ಇಂಪ್ರೂವ್‌ಮೆಂಟ್ ಸಾಲವನ್ನೂ ಮತ್ತು 43 ಸಾವಿರ ರೂಪಾಯಿಗಳಷ್ಟು ನೀರಾವರಿ ಬಾವಿಗಳ ಸಾಲವನ್ನೂ ಕೊಟ್ಟಿರುತ್ತಾರೆ. ಇದು ದೊಡ್ಡ ಪ್ರಮಾಣದಲ್ಲಿದೆ. ಇನ್ನೂ ಸ್ವಲ್ಪ ದುಡ್ಡು ಉಳಿದುಹೋಗಿದ್ದರೆ ಅದಕ್ಕೆ ಸಕಾರಣವಾಗಿರಬೇಕು.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಎಷ್ಟು ಅರ್ಜಿಗಳು pending ನಲ್ಲಿವೆ ?

Mr. SPEAKER.—The question is about Bangalore District. How can he give particulars about Tumkur ?

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ನಂನ್ಯಾನದಲ್ಲಿ ಕೊಟ್ಟಿರತಕ್ಕ ಸಾಲದ ಪ್ರಸ್ತಾಪಮಾಡುತ್ತಾ, ಸಾಲಕ್ಕೆ ಅರ್ಜಿಹಾಕಿಕೊಂಡಿರುವವರಿಗೆ ಕೆಲವು ಕಡೆ ಕೊಡದೆ ಇರುವುದಕ್ಕೆ ಕಾರಣವೇನೆಂದು ನಾನು ಕೇಳುತ್ತಿದ್ದೇನೆ.

Mr. SPEAKER.—If he answers I have no objection.

ಡಾ॥ ಆರ್. ನಾಗನಗೌಡ.—ಯಾವುದಾದರೂ ನಿರ್ದಿಷ್ಟವಾದ ಸಂದರ್ಭಗಳಿದ್ದರೆ, ಗಮನಕ್ಕೆ ತೆಗೆದು ಕೊಂಡ ಬನ್ನಿ. ವಿಚಾರಿಸಿ ಹೇಳುತ್ತೇನೆ.

ಶ್ರೀ ಜಿ. ನಾರಾಯಣಗೌಡ.—ತಕಾವಿ ಸಾಲ ಗಳಿಗಾಗಿ ಅರ್ಜಿಗಳನ್ನು ಹಾಕಿಕೊಂಡಿದ್ದ ರೈತರಿಗೆ ಸಕಾಲದಲ್ಲಿ ಅವರ ಅರ್ಜಿಗಳನ್ನು ವಿಲೇವಾರಿ ಮಾಡಿ ಸಾಲ ಒದಗಿಸದೆ ಸಾವಕಾಶ ಮಾಡಿದ್ದರೆ ಅಂಥ ಅಧಿಕಾರಿಗಳ ಮೇಲೆ ಸರ್ಕಾರದವರು ಏನು ಕಾರ್ಯ ಕ್ರಮಕ್ಕೆಗೊಳ್ಳುತ್ತೀರಿ ?

Mr. SPEAKER.—Any other supplementary pertaining to this question ?

ಶ್ರೀ ಜಿ. ನಾರಾಯಣಗೌಡ.—ಇದಕ್ಕೆ ಸಂಬಂಧಿಸಿದ ಹಾಗೆಯೇ ಈ ತಕಾವಿ ಸಾಲಗಳ ಬಗ್ಗೆ ಅಡಚಣೆ ಉಂಟುಮಾಡಿದ ಅಧಿಕಾರಿಗಳ ಮೇಲೆ ಸರ್ಕಾರದವರು ಏನು ಕಾರ್ಯಕ್ರಮಕ್ಕೆಗೊಳ್ಳುತ್ತಾರೆ ?

Mr. SPEAKER.—That is not a proper supplementary question pertaining to the main question. It does not arise. There are certain conditions under which loans are granted. That is understood.

Sri G. SIVAPPA.—Will the Government extend further concession to them in the form of reducing the rate of interest and increasing the number of instalments ?

Dr. R. NAGAN GOWDA.—These tractors were sold at concession rates and the purchases were allowed a large number of instalments. But the question of reducing the rate of interest and also increasing the number of instalments will be considered.

ಶ್ರೀ ಡಿ. ಎಂ. ಗೋವಿಂದರಾಜು.—ನೆಲಮಂಗಲ ತಾಲ್ಲೂಕಿಗಾಗಿ ನೀರಾವರಿ ಬಾವಿಗಳಿಗಾಗಿ 6,000 ರೂಪಾಯಿಗಳನ್ನು ಸಾಲವಾಗಿ ಕೊಡಲು ಒದಗಿಸಿರುತ್ತಾರೆ. ಆದರೆ ಒಂದು ಕಾಸೂ ಸಹ ಖರ್ಚಾಗಿಲ್ಲ. ಕಾರಣವೇನು ?

ಡಾ॥ ಆರ್. ನಾಗನಗೌಡ.—ಅದಕ್ಕಾಗಿ ಅರ್ಜಿಗಳು ಬಾರದೇ ಇರಬಹುದು.

ಶ್ರೀ ಡಿ. ಎಂ. ಗೋವಿಂದರಾಜು.—ಅರ್ಜಿಗಳು ಬಂದು ಅದಕ್ಕಾಗಿ ಸಾಲ ಕೊಟ್ಟಿದ್ದರೂ ಸಹ ಒಂದು ಕಾಸೂ ಸಹ ಖರ್ಚಾಗಿಲ್ಲ ; ಕಾರಣವೇನು ?

ಡಾ॥ ಆರ್. ನಾಗನಗೌಡ.—ಅದನ್ನು ವಿಚಾರಿಸುತ್ತೇನೆ.

Sri M. LINGANNA.—May I know whether the Government have fixed any time-limit within which applications received for land improvement, takkavi and irrigation loans should be disposed of ?

Dr. R. NAGAN GOWDA.—They make enquiries and as soon as enquiries are over, they dispose of the loan applications. Usually they do it as quickly as possible. Some time is needed to make enquiries as to whether a person is solvent, etc.

Sri M. LINGANNA.—Is it not desirable, in view of several questions put by Hon'ble Members, that a time-limit should be fixed, because most of the loan applications have been pending without being enquired into and disposed of ?

Dr. R. NAGAN GOWDA.—I am inclined to say I would consider it. But the difficulty oftentimes, sometimes at least, will be with regard to production of proper title deeds and documents by the applicants themselves. Otherwise, there should not be delay at all. As soon as an application comes enquiries will at once be made and if there is proper value for the land, certainly we will give them loans very quickly. But I will examine the question of fixing the time-limit or at least seeing why it is delayed after a fixed time.

ಶ್ರೀ ಜಿ. ಪಾಪಣ್ಣ.—ನೀರಾವರಿ ಬಾವಿಗಳಿಗೆ ಒದಗಿಸಿರುವ ಹಣ ಖರ್ಚಾಗದೇ ಇರುವುದಕ್ಕೆ ಸಬ್‌ಸಿಡಿಗೆ ಅವಕಾಶವಿಲ್ಲದಂತೆ ಮಾಡಿರುವುದೇ ಕಾರಣವಲ್ಲವೆ ?

Dr. R. NAGAN GOWDA.—I do not know about that.

ಶ್ರೀ ಜಿ. ಬಸಪ್ಪ.—ನೀರಾವರಿ ಬಾವಿಗಳಿಗಾಗಿ ಸಾಲವನ್ನು ಯಾವ ಆಧಾರದ ಮೇಲೆ ಹಂಚಿರುತ್ತೀರಿ ?

Dr. R. NAGAN GOWDA.—I would like to have notice as to how it has been done.

ಶ್ರೀ ಜಿ. ಬಸಪ್ಪ.—ಬಾವಿಗಳು ಇರತಕ್ಕಕಡೆ ಇದಕ್ಕಾಗಿ ಹಣವನ್ನು ಜಾಸ್ತಿಯಾಗಿ ಕೊಡುವ ಬದಲು ನೀರಾವರಿ ಬಾವಿಗಳಿಲ್ಲದ ಕಡೆ ಹೆಚ್ಚು ಪೊಬಲಗನ್ನು ಒದಗಿಸಿದರೆ ಖರ್ಚಾಗುತ್ತದೆಯಲ್ಲವೇ ?

ಡಾ॥ ಆರ್. ನಾಗನಗೌಡ.—ಎಲ್ಲಿ ಅವಶ್ಯಕವಾಗಿ ಬೇಕೋ ಅಲ್ಲಿಗೆ ಹೆಚ್ಚಿನ ಪೊಬಲಗನ್ನು ಒದಗಿಸಿದೆ.

ಶ್ರೀ ಕೊಟ್ರ ಬಸವನಗೌಡ.—ತಕಾವಿ ಸಾಲಗಳ ಬಗ್ಗೆ ರೈತರಿಗೆ ಸರಿಯಾದ ಮಾಹಿತಿ ಇಲ್ಲ. ಸ್ಥಳೀಯ ಅಧಿಕಾರಿಗಳು ಸಹ ಸೂಕ್ತ ತಿಳಿವಳಿಕೆ ಕೊಟ್ಟಿಲ್ಲ. ಆದುದರಿಂದ ಇದಕ್ಕಾಗಿ ಅಡ್ವೈಜರಿ ಸಮಿತಿಯೊಂದನ್ನು ನೇಮಕ ಮಾಡುತ್ತೀರಾ ?

ಡಾ॥ ಆರ್. ನಾಗನಗೌಡ.—ಅದನ್ನು ವಿಚಾರಿಸುತ್ತೇನೆ.

ಶ್ರೀ ವಿ. ಆರ್. ನಾಯ್ಡು.—ಸರ್ಕಾರದವರು ಈ ಸಾಲಗಳನ್ನು ಒದಗಿಸುವ ಬಗ್ಗೆ ಕೊಟ್ಟ ಹಣವು ಪುನಃ ಪಾಪಸ್ಸು ಬರುವುದಕ್ಕೂ, ಕೊಡುವ ಸಾಲಕ್ಕೂ ಸಾಕಾಗುವಷ್ಟು ಆಧಾರ ಇಟ್ಟುಕೊಂಡಿರುತ್ತಾರೆಯೆ ?

ಡಾ॥ ಆರ್. ನಾಗನಗೌಡ.—ಸಾಲವನ್ನು ಮಂಜೂರು ಮಾಡುವುದಕ್ಕೆ ಮುಂಚೆ ಅವರ ಆಸ್ತಿ ಪಾಸ್ತಿಗಳನ್ನು ನೋಡಿಕೊಂಡು, ಸಾಕಾದಷ್ಟು ಆಧಾರವನ್ನಿಟ್ಟುಕೊಂಡೇ ಸಾಲ ಕೊಡುವುದು.